ದಿಃ 25.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ಶ್ರೀಮತಿ ಬಿ.ಎಸ್.ಆರ್. ವಕೀಲರಿಂದ ,</u>**

1. ನನ್ನ ತಾಯಿ ಹಾಗೂ ವಾದಿಯ ತಾಯಿ ಅಕ್ಕ – ತಂಗಿಯರು. ನನಗೆ ಈಗ 60 ವರ್ಷ ವಯಸ್ಸು. ನನ್ನ ಜನ್ಮ ದಿನಾಂಕ ನನಗೆ ತಿಳಿದಿಲ್ಲ. ನಾನು, 2 ನೇ ಪ್ರತಿವಾದಿಗಿಂತ ಸುಮಾರು 20 ವರ್ಷ ಚಿಕ್ಕವನು. ನಾನು ಬೀರನಹಳ್ಳಿ ಗ್ರಾಮದಲ್ಲಿ ವಾಸವಿದ್ದು, ವ್ಯವಸಾಯ ಮಾಡುತ್ತೇನೆ. ನನಗೆ ವ್ಯವಸಾಯದ ಜಮೀನು ಇರುತ್ತದೆ, ಅದರ ಸರ್ವೆ ನಂಬರ್ ನನಗೆ ತಿಳಿದಿಲ್ಲ. ನಾನು ಹಿಟ್ಟಿನ ಗಿರಣಿಯನ್ನು ಸಹ ನಡೆಸುತ್ತೇನೆ ಎಂದರೆ ಸರಿ. ಅದು ನನ್ನ ಜಾಗದಲ್ಲಿ ಇರುತ್ತದೆ. ಅದಕ್ಕೆ ಪರವಾನಿಗೆ ಪಡೆದಿರುವುದಿಲ್ಲ. ತಳ್ಳಿಕಟ್ಟೆ ನಮ್ಮ ಊರಿನ ನಡುವೆ ಸುಮಾರು 15 ಕಿ.ಮೀ ಅಂತರ. ನನಗೆ ವ್ಯವಹಾರ ಜ್ಞಾನ ಇರುತ್ತದೆ ಎಂದರೆ ಸರಿ. ವಾದಿ ಈ ದಾವೆಯಲ್ಲಿ ಎಷ್ಟು ಭಾಗ ಬೇಕು ಎಂದು ಕೇಳುತ್ತಿರುತ್ತಾರೆ ನನಗೆ ತಿಳಿದಿಲ್ಲ. ದಾವಾ ಸ್ವತ್ತುಗಳು ಯಾವುವು ಎಂಬ ಬಗ್ಗೆ ನನಗೆ ತಿಳಿದಿಲ್ಲ.

2. ಗಂಗಮಾಳಮ್ಮ ಹಾಗೂ ಜಯಮ್ಮ ಎಂಬುವರು ವಾದಿಯ ಅಕ್ಕಂದಿರು. ಅವರ ಮದುವೆ ಯಾವಾಗ ಆಗಿರುತ್ತದೆ, ಅವರುಗಳಿಗೆ ಒಟ್ಟು ಕುಟುಂಬದ ಸ್ವತ್ತಿನಲ್ಲಿ ಏನು ಪಾಲನ್ನು ನೀಡಲಾಗಿದೆ ನನಗೆ ತಿಳಿದಿಲ್ಲ. ವಾದಿಯ ತಂದೆಯ ಕುಟುಂಬದಲ್ಲಿ ಏನು ವಿಭಾಗ ಆಗಿದೆ ನನಗೆ ತಿಳಿದಿಲ್ಲ. ಸದರಿ ವಿಭಾಗ ಯಾವಾಗ ಆಗಿರುತ್ತದೆ ಹಾಗೂ ಅದರಲ್ಲಿ ಯಾವ ಯಾವ ಸ್ವತ್ತುಗಳು ವಾದಿಯ ತಂದೆಯ ಪಾಲಿಗೆ ಬಂದಿರುತ್ತವೆ ನನಗೆ ತಿಳಿದಿಲ್ಲ. ಆ ಸಂಬಂಧ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ. ವಾದಿಯ ತಂದೆಯ ಮರಣದ ನಂತರ ಯಾವ ಸ್ವತ್ತುಗಳ ಖಾತೆ ಯಾರ ಹೆಸರಿಗೆ ಬದಲಾಗಿರುತ್ತದೆ ನನಗೆ ತಿಳಿದಿಲ್ಲ. 1 ರಿಂದ 3 ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಮೋಸದಿಂದ ದಾಖಲೆ ಮಾಡಿಕೊಂಡಿರುತ್ತಾರೆ ಎಂದು ನಾನು ನನ್ನ ಮುಖ್ಯ ವಿಚಾರಣೆ

ಪ್ರಮಾಣ ಪತ್ರದಲ್ಲಿ ಬರೆಸಿದ್ದು, ಅವರು ಏನು ದಾಖಲೆ ಮಾಡಿಕೊಂಡಿರುತ್ತಾರೆ ನನಗೆ ತಿಳಿದಿಲ್ಲ. ವಾದಿಯ ತಂದೆಯ ಮರಣದ ನಂತರ ಆತನ ಸ್ವತ್ತುಗಳ ಖಾತೆಯನ್ನು ಯಾರ ಹೆಸರಿಗೆ ಮಾಡಲಾಗಿದೆ ನನಗೆ ತಿಳಿದಿಲ್ಲ. 1 ರಿಂದ 3 ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಏನು ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ ನನಗೆ ತಿಳಿದಿಲ್ಲ.

3. ವಾದಿ ಯಾವ ಸ್ವತ್ತುಗಳಲ್ಲಿ ಸ್ವಾಧೀನ ಇರುತ್ತಾರೆ ನನಗೆ ತಿಳಿದಿಲ್ಲ. ದಾವಾ ಸ್ವತ್ತುಗಳಿಂದ ವಾದಿ ಏನು ಆದಾಯ ಪಡೆಯುತ್ತಿರುತ್ತಾರೆ ನನಗೆ ತಿಳಿದಿಲ್ಲ. 2 ನೇ ಪ್ರತಿವಾದಿ ಯಾವ ಸ್ವತ್ತುಗಳ ಮಾಲೀಕತ್ವ ಹೊಂದಿರುತ್ತಾರೆ ನನಗೆ ತಿಳಿದಿಲ್ಲ. 2 ನೇ ಪ್ರತಿವಾದಿ ಯಾವ ಸ್ವತ್ತುಗಳನ್ನು ಹೇಗೆ ಖರೀದಿಸಿರುತ್ತಾರೆ ನನಗೆ ತಿಳಿದಿಲ್ಲ. ನಾನು ವಾದಿ ಹಾಗೂ ಪ್ರತಿವಾದಿಯವರೊಂದಿಗೆ ವಿಶ್ವಾಸದಿಂದ ಇರುತ್ತೇನೆ. ವಾದಿ ಹಾಗೂ ಪ್ರತಿವಾದಿಯರ ಕುಟುಂಬದ ಖರ್ಚು - ವೆಚ್ಚಗಳ ಬಗ್ಗೆ ನನಗೆ ತಿಳಿದಿರುವುದಿಲ್ಲ. ಅವರ ಕುಟುಂಬದ  ವಿಷಯಗಳು ನನಗೆ ಏನು ತಿಳಿಯದೇ ಇದ್ದರು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಗಳನ್ನು ವಾದಿಯೇ ಹೇಳಿ ಬರೆಸಿರುತ್ತಾರೆ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**